ಕೆಲಸಮಾಡುತ್ತಾರೆ. ಆ ಮನಮೋಹಕ ಚಿತ್ರಗಳಿಂದಾಗಿಯೇ ಗೆಲ್ಲುತ್ತಾರೆ ಕೂಡ.

ಈ ಕಾದಂಬರಿಯ ಹೆಸರು 'ಸಿ.ಕೆ. ಜೇಡನ ಆತ್ಮಚರಿತ್ರೆ' ಎಂದಿದ್ದರೂ, ಇದು ಒಬ್ಬನದೇ ಕತೆಯಿಲ್ಲ. ಇಲ್ಲಿನ ಅನೇಕ ಪಾತ್ರಗಳಿಗೆ ತಮ್ಮದೇ ಆದ ನಿಗೂಢ ಚರಿತ್ರೆಗಳಿಗಿವೆ. ಈ ಕಾದಂಬರಿಗೆ ಒಂದೇ ವಸ್ತುವಿನ ಕೇಂದ್ರವಿಲ್ಲ. ಅಥವ ಜೇಡನೇ ಮುಖ್ಯ ಪಾತ್ರವೆಂದರೂ ಕಷ್ಟವೇ. ಅಂಬೇಡ್ಕರ್ ರಗ್ಬೀ ಆಟದ ಪ್ರಸ್ತಾಪದೊಂದಿಗೆ ಆರಂಭಗೊಳ್ಳುವ ಕಥನ ಕ್ರಮೇಣ ತನ್ನ ದಿಕ್ಕುಗಳನ್ನು ಮನಬಂದಂತೆ ಬದಲಾಯಿಸುತ್ತದೆ. ಜೇಡ ತನ್ನ ಬದುಕನ್ನು ಈ ಆಟದಿಂದ ಗುರುತಿಸಿಕೊಂಡರೂ ಉದ್ದಕ್ಕೂ ಪರಮ ವಿಕ್ಷಿಪ್ತ ಮನುಷ್ಯನಂತೆ ಕಾಣುತ್ತಾನೆ. ಅನೇಕ ಪಾತ್ರಗಳು ಯುರೋಪಿಯನ್ ಕಾದಂಬರಿಗಳ ನಾಯಕರಂತೆ ಕಂಡರೂ ತಮ್ಮದೇ ವ್ಯಕ್ತಿತ್ವವನ್ನು ಪ್ರಕಟಿಸಲು ವಿಫಲವಾಗುತ್ತವೆ. ಜೇಡ ಇಲ್ಲಿ ಕಾಣುವುದು ಒಬ್ಬ ಕಳ್ಳನಾಗಿ, ರಗ್ಬಿ ಆಟಗಾರ, ಜೂಜುಗಾರ, ವ್ಯಂಗ್ಯಚಿತ್ರಕಾರ ಮತ್ತು ಬಹುದೊಡ್ಡ ಓದುಗನಾಗಿ. ಆದರೆ, ಇವೆಲ್ಲವನ್ನು ಮೀರಿ ಆತ ತನ್ನ ಬದುಕನ್ನು ಸ್ಥಿರವಾಗಿ ಕಾಣುವುದು ಅಸಾಧ್ಯ. ಇಲ್ಲಿನ ಸಂಬಂಧಗಳಿಗೆ ಹಲ ಬಗೆಯ ಅಸಂಗತ ಗುಣಗಳಿವೆ. ಆದರೆ, ಪ್ರೀತಿ ದಟ್ಟವಾಗಿದೆ. ಗಿರಿ–ಜೇಡ, ಜೇಡ–ರಾಣಿ, ಒಂಡ್ರೆ, ಹಾರ್ಲೆ, ಮುಂತಾದ ಪಾತ್ರಗಳ ಸಂಬಂಧ ಮತ್ತು ವ್ಯಕ್ತಿಗಳ ಯಾನವು ಬದುಕನ್ನು ಕಟ್ಟಿಕೊಳ್ಳುವ ಇರಾದೆಯಲ್ಲೇ ಸಾಗುತ್ತವೆ. ಹೀಗೆ ಸಾಗುವಾಗ ಮೈಮನಗಳ ಅಭೀಪ್ಸೆಗಳು, ಬದುಕುವ ಉತ್ಕಟತೆ, ಕೆಟ್ಟ ಸಾಮಾಜಿಕ ವ್ಯವಸ್ಥೆಯ ಮೇಲೆ ಇವರಿಗಿರುವ ಸಿಟ್ಟು ಎಲ್ಲವೂ ಬಯಲಾಗುತ್ತವೆ. ಜೇಡನೇ ತನ್ನ ಚರಿತ್ರಯ ಗರ್ಭದಲ್ಲಿ ಏಕಾಂಗಿತನ, ಕಾಮ, ಓದು, ಕಳ್ಳತನ, ಚಳವಳಿ ಮುಂತಾದ ವಿಚಾರಗಳನ್ನು ಒಳಗೊಂಡಿದ್ದರೂ ತನ್ನ ಯಾನದಲ್ಲಿ ನಿರ್ದಿಷ್ಟ ಗುರಿಯನ್ನು ಹೊಂದಿಲ್ಲ. ಹೀಗೆ ಬದುಕುವ ಮನುಷ್ಯರಿಗೆ ಇದು ಅಸಾಧ್ಯವೂ ಹೌದು. ತನ್ನ ಜೀವನದಲ್ಲಿ ಇವು ಇಲ್ಲದಿದ್ದರೆ ಜೇಡ ಬದುಕಲಾರ, ಅಷ್ಟರಮಟ್ಟಿಗೆ ಈ ಜೀವನ ಕ್ರಮಕ್ಕೆ ಆತ ಒಗ್ಗಿಕೊಂಡಿದ್ದಾನೆ. ಜೇಡನ ವ್ಯಕ್ತಿತ್ವದ ಅಸಂಗತ ಗುಣಕ್ಕೆ ತಕ್ಕಂತೆ ಇಲ್ಲಿನ ನಿರೂಪಣೆ, ಕಥನ ಸಾಗಿದರೂ ಎಲ್ಲವೂ ಚದುರಿದ ಚಿತ್ರಗಳಂತೆ ಕಾಣುತ್ತವೆ. ಜೇಡನ ಯಾನವು ಹಲವು ರೀತಿಯ ದುರಂತಗಳನ್ನು ಎಡತಾಕುತ್ತಲೇ ಇರುತ್ತದೆ. ಅವನು ದುಗುಡ, ದುಃಖ, ಅಸಹಾಯಕತೆ, ಸುತ್ತಣಲೋಕದ ವಂಚಕತನಗಳನ್ನು ಎದುರುಗೊಳ್ಳುತ್ತಾ ಸಾಗುತ್ತಾನೆ.

ಕಥನ ಸಂಪೂರ್ಣ ನಗರದಲ್ಲೇ ಸಾಗುತ್ತದೆ. ಮಂಜುನಾಥ್ ಅವರ ಶಕ್ತಿ ಮತ್ತು ಬಹುದೊಡ್ಡ ಮಿತಿಗಳು ಇರುವುದು ಇಲ್ಲಿಯೇ. ಮೇಲಿನ ವೈವಿಧ್ಯಮಯ ಬದುಕು ಮತ್ತು ಹಲವು ರೀತಿಯ ತಾತ್ವಿಕತೆಗಳು ಓದುಗನಿಗೆ ತಟ್ಟಿದರೂ ಅವು ಕ್ರಮಬದ್ಧವಾಗಿಲ್ಲದ ಕಾರಣ ಚಲ್ಲಾಪಿಲ್ಲಿಯಾಗಿ ಗೋಚರಿಸುತ್ತವೆ. ನಗರ ದಲಿತರ ಚಿತ್ರಗಳು, ಕ್ರೈಸ್ತ ದಲಿತರ ಚಿತ್ರಗಳು, ದಲಿತ ಪ್ಯಾಂಥರ್, ನಗರ ದಲಿತ ಹೆಣ್ಣುಮಕ್ಕಳ ಶೋಷಣೆ, ಕ್ರೈಸ್ತ ಪಾದ್ರಿಗಳ ಮತ್ತು ದಲಿತ ಜಮೀನ್ದಾರಿ ಚಿತ್ರಗಳು ಇಲ್ಲಿವೆ. ಆದರೆ ಇವನ್ನು ತಮ್ಮ ಇದುವರೆಗಿನ ಕಾದಂಬರಿಗಳಲ್ಲಿ ಆರಿಸಿಕೊಂಡಿರುವ ವಸ್ತು ವೈವಿಧ್ಯಕ್ಕೆ ತಕ್ಕಂತೆ ಗಟ್ಟಿಯಾಗಿ ಬಳಸಿಕೊಂಡಿಲ್ಲ. ಇವು ಮಿಂಚಿ ಮರೆಯಾಗುವ ದೃಶ್ಯಗಳಾಗಿಯೇ ಉಳಿಯುತ್ತವೆ. ಯಾವುದಾದರೂ ಪಾತ್ರಗಳಿಗೆ ಇವುಗಳನ್ನು ದೊಡ್ಡ ನೆಲೆಯಲ್ಲಿ ಜೋಡಿಸುವ ಕೆಲಸ ಮಾಡಬೇಕಾಗಿತ್ತು. ಅವು ಹಲವು ಬಾರಿ ಸುಮ್ಮನೆ ಬಂದು ಹೋಗುತ್ತವೆ. ಅಸ್ಪೃಶ್ಯ ಹೆಣ್ಣು ಮಕ್ಕಳ ಮೇಲೆ ನಗರಗಳಲ್ಲಿ ನಡೆಯುತ್ತಿರುವ ಲೈಂಗಿಕ ಶೋಷಣೆಯನ್ನು ವಿರೋಧಿಸುವುದು ಕಾದಂಬರಿಕಾರರ ಮುಖ್ಯ ಧೋರಣೆಯಾದರೂ, ಅದು ಕಾಮದ ವಿವರಣೆಯಾಗಿಯೇ ಉಳಿದುಬಿಡುತ್ತದೆ ಎಂಬ ಅನುಮಾನವೂ ಹುಟ್ಟುತ್ತದೆ. ಕೆಲವು ಸಂಗತಿಗಳು 'ಪ್ರಸ್ತಾಪ'ಗಳ ಮಟ್ಟದಲ್ಲಿಯೇ ನಿಲ್ಲುತ್ತವೆ. ಉದಾಹರಣೆಗೆ: ದಲಿತ ಜಮೀನ್ದಾರರ ಪ್ರಸಂಗ ಮತ್ತು ನೂರ ಐವತ್ತು ಎಕರೆ ಜಮೀನನ್ನು ಮೇಲ್ಜಾತಿಯವರು ಕಬಳಿಸಿರುವ ಪ್ರಸಂಗಗಳು. ಹಲವು ಬಾರಿ ಜೇಡ ಆಧುನಿಕ ನಗರದ ದಲಿತ